**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಅಸಲು ದಾವಾ ಸಂಖ್ಯೆ : 193/2012**

**ಪಿ. ಡಬ್ಲೂ : 2**

--------------------------------------------------------------------------------

**ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ 13.10.2025**

****

**ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಾದ ಶ್ರೀ .KAV ವಕೀಲರಿಂದಃ**

1. ವಿಠ್ಠಲ ಮುರಾರಿ ಗವಳಿ ಮೂಲ ವಾದಿ ಹಾಗೂ ಭೀಮಪ್ಪ ನಿಂಗಪ್ಪ ಮಾಗಡಿ , ಕೆಂಚಪ್ಪ ವಿಠ್ಠಲ ಮಾಗಡಿ ಮೂಲ ಪ್ರತಿವಾದಿಯರು ಇವರಿಗೂ ಹಾಗೂ ನನ್ನ ತಂದೆ ನಿಂಗಪ್ಪ ರವರಿಗೆ ಪೂಜೆಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ವಿಠ್ಠಲ ರವರ ತಂದೆ ಮುರಾರಿ ಅವರ ತಂದೆ ನಿಂಗಪ್ಪ ರವರ ಬಗ್ಗೆ ನಿಮಗೆ ಏನಾದರೂ ಗೊತ್ತೆ ಎಂದರೆ ಸಾಕ್ಷಿಯು ವಿಠ್ಠಲ ಹಾಗೂ ಮುರಾರಿ ರವರನ್ನು ನೋಡಿರುತ್ತೇನೆ , ಮುರಾರಿ ರವರ ತಂದೆಯನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ವಿಠ್ಠಲ ರವರ ಅಜ್ಜ ನಿಂಗಪ್ಪ ಹಾಗೂ ಪ್ರತಿವಾದಿಯರ ಮದ್ಯೆ ಆದ ವ್ಯವಹಾರವನ್ನು ನಿವೇನಾದರೂ ನೋಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು 1958 ರಲ್ಲಿ ಜನಿಸಿರಲಿಲ್ಲ ಎಂದರೆ ಸರಿ. ವಾದಿ ಹಾಗೂ ಪ್ರತಿವಾದಿಯರ ಮದ್ಯೆ ಆದ ಪೂಜೆಗೆ ಸಂಬಂಧಿಸಿದ ನಿಬಂದನೆಗಳನ್ನು ನಾನು ನೋಡಿಲ್ಲ ಎಂದರೆ ಸರಿ. ವಿಠ್ಠಲ ರವರ ಅಜ್ಜ ನಿಂಗಪ್ಪ ರವರು 1ನೇ ಪ್ರತಿವಾದಿಯವರಿಗೆ 1/16 ಅಂದರೆ 7 ದಿವಸ 1958 ರಲ್ಲಿ ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಅದನ್ನು ನಿವೇನಾದರೂ ನೋಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಸದರಿ ಖರೀದಿ ಪತ್ರದ ಪ್ರಕಾರ 7 ದಿವಸ ಪೂಜಾ ಕಾರ್ಯವನ್ನು ಅವರು ಹಾಗೂ ಅವರ ಕುಟುಂಬಸ್ಥರು ಇಲ್ಲಿಯವರೆಗೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ.

2. ನಾನು ಗಾವಡಿ ವಂಶಸ್ಥರ ಬಡ್ಡಿಯನ್ನು , ಮಗಾಡಿ ವಂಶಸ್ಥರ ಬಡ್ಡಿಯನ್ನು , ಸಣ್ಣ ಮೂರಿ ವಂಶಸ್ಥರ ಬಡ್ಡಿಯನ್ನು , ರೊಳ್ಳಿ ವಂಶಸ್ಥರ ಬಡ್ಡಿಯನ್ನು ಎಷ್ಟು ಇತ್ತು ಹಾಗೂ ಅವರಿಗೆ ಎಷ್ಟು ದಿನ ಪೂಜೆ ಮಾಡುವ ಅಧಿಕಾರ ಇದೆ ಎಂದು ನಾನು ನೋಡಿಲ್ಲ ಎಂದರೆ ಸರಿ. ನಾನು ವಾದಿಯರು ಹೇಳಿ ಕೊಟ್ಟ

ಹಾಗೆ ಸಾಕ್ಷಿ ನುಡಿಯಲು ಬಂದಿರುತ್ತೇನೆ ನನಗೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ಗೊತ್ತಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.